

> ಕವಿತೆ ಮತ್ತು ನೃತ್ಯ ನನ್ನ ಅವಳಿಜವಳಿ ಮಕ್ಕಳಿದ್ದ ಹಾಗೆ.

ವಿಚಾರಗಳಲ್ಲೂ ನನ್ನ ಗುರುತಿದೆ. ನನ್ನ ಇನ್‌ಸ್ಟಾಗ್ರಾಂ ಪೋಸ್ಟ್‌ಗಳನ್ನು ನೀವು ನೋಡಿದ್ರೆ ನಿಮಗೆ ಗೊತ್ತಾಗತ್ತೆ. ನಾನು **'Godess of balance'** (ಸ್ಥಿತಿ ದೇವತೆ) ರೂಪ ಅಂತ ಕರೆದುಕೊಳ್ಳೋದಕ್ಕೆ ಇಷ್ಟ ಪಡ್ತೀನಿ. ನಾನು ನನ್ನ ಆಧ್ಯಾತ್ಮಿಕ ಪ್ರಯಾಣವನ್ನ ಶುರು ಮಾಡಿದಾಗ ನನ್ನನ್ನ ಕಾಡ್ತಾ ಇದ್ದ ಪ್ರಶ್ನೆ ಅಂದ್ರೆ, ಅಥವಾ ನನಗೇ ನಾನು ಹಾಕಿಕೊಳ್ತಾ ಇದ್ದ ಪ್ರಶ್ನೆ ಅಂದ್ರೆ – 'ಶಿಲೋಕ್ ಯಾರು?' ಅನ್ನೋದಾಗಿತ್ತಾ ಇತ್ತು. ನನ್ನ ಅಸ್ಮಿತೆ ಏನು? ಅದಕ್ಕೆ ಉತ್ತರ ಆಗಿ ನಾನು ಕಂಡುಕೊಂಡಿದ್ದೇನೆಂದರೆ, ಈ ಜಗತ್ತಲ್ಲಿ ಸಮತೋಲನವನ್ನು ತೆಗೆದುಕೊಂಡುಬರಬೇಕು ಅಂತಾನೆ ನನ್ನ ಹುಟ್ಟಿನ ಹಿನ್ನೆಲೆ ಇದೆ ಅಂತ ನನ್ನ ಒಳಮನಸ್ಸು ತುಂಬಾ ಸಲ ಕೂಗಿ ಕೂಗಿ ಹೇಳುತ್ತೆ. ನಾನು ಮಾಡುವ ಪ್ರತಿಯೊಂದು ಕಾರ್ಯವೂ ಕೂಡ ಜಗತ್ತಲ್ಲಿ ಎಲ್ಲೋ ಒಂದು ಕಡೆ ಸಮತೋಲನವನ್ನು ತಂದುಕೊಡುತ್ತೆ ಅನ್ನುವ ವಿಚಾರವನ್ನು ನಾನು ಬಲವಾಗಿ ನಂಬ್ತೀನಿ.

◆ **ಒಂದು ಕವಿಗೋಷ್ಠಿಯಲ್ಲಿ ನಿಮ್ಮನ್ನು 'ಕ್ವೀರ್ ಪೊಯೆಟ್' ಅಂತ ಕರೆದಿದ್ದಕ್ಕೆ ನೀವು ಪ್ರತಿರೋಧವಾಗಿ ಕವಿತೆ ಬರೆದು ಅದೇ ವೇದಿಕೆಯಲ್ಲಿ ಅದನ್ನ ಪ್ರಸ್ತುತಪಡಿಸಿದ್ರಿ. ಯಾಕೆ ನಿಮಗೆ ಈ ವಿಶೇಷಣಗಳ ಬಗ್ಗೆ ನಿರಾಸಕ್ತಿ? ಇಂದಿನ ವರ್ತಮಾನದ ಬೆಳವಣಿಗೆಗಳು, ಸಾಂಸ್ಕೃತಿಕ ಕಾರ್ಯಕ್ರಮಗಳ ಆಯೋಜಕರು ಪ್ರಜ್ಞಾಪೂರ್ವಕವಾಗಿ ಬಹುತ್ವದ ದನಿಗಳನ್ನು ಒಳಗೊಳ್ಳಲೇಬೇಕು ಎನ್ನುವ ಒತ್ತಾಸೆಗೆ ಕಿವಿಗೊಡಲೇಬೇಕಾದ ಆಶಾದಾಯಕ ಘಟ್ಟದಲ್ಲಿ**